ರುದ್ರಪ್ಪನವರು, ತುಮಕೂರು ಕ್ಷೇತ್ರದ ಷಫಿ ಅಹಮ್ಮದ್‌ನವರು, ಹೆಗ್ಗಡದೇವನಕೋಟೆ ಕ್ಷೇತ್ರದ ಎಂ.ಪಿ. ವೆಂಕಟೇಶ್‌ವರು, ಶಿಗ್ಗಾವಿ ಕ್ಷೇತ್ರದ ಕುನ್ನೂರ್‌ರವರು, ಶಹಬಾದ್ ಕ್ಷೇತ್ರದ ವೈ.ಬಿ. ಚವಾಣ್‌ರವರು, ಧಾರವಾಡ ಕ್ಷೇತ್ರದ ಗೋಪಿನಾಥ್ ಸಾಂಡ್ರ ಅವರು, ಗುಲ್ಬರ್ಗ ಕ್ಷೇತ್ರದ ಕುಮರಲ್ ಇಸ್ಲಾಂ ಅವರು, ಹಾಸನ ಕ್ಷೇತ್ರದ ಹನುಮೇಗೌಡರು, ಹನೂರು ಕ್ಷೇತ್ರದ ರಾಜೂಗೌಡರು, ಶಿಡ್ಲಘಟ್ಟ ಕ್ಷೇತ್ರದ ಮುನಿಯಪ್ಪನವರು, ಸಿಂಧನೂರಿನ ಬಸವನಗೌಡರು, ನರಗುಂದ ಕ್ಷೇತ್ರದ ಕುಲಕರ್ಣಿಯವರು, ಬೈಂದೂರಿನ ಆಚಾರ್ ಅವರು, ಬೇಲೂರಿನ ಲಕ್ಷ್ಮಣಯ್ಯನವರು, ತಮ್ಮ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳಿದ್ದಾರೆ. ಎಲ್ಲರ ಹೆಸರನ್ನು ನಾನು ಬರೆದುಕೊಂಡಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಅತಿವೃಷ್ಟಿಯಾಗಿ ಅನಾನುಕೂಲವಾಗಿದೆ. ಆದರ ಬಗ್ಗೆಯೂ ಸರ್ಕಾರ ಗಮನ ಹರಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ರಾಜ್ಯದ ಹಲವಾರು ಭಾಗಗಳಲ್ಲಿ ಬರಗಾಲ ಎದ್ದು ಕಾಣುತ್ತಿದೆ. ಅಲ್ಲಿನ ಜನರಿಗೆ ಉದ್ಯೋಗದ ಸಮಸ್ಯೆ ಇದೆ. ರೈತರಿಗೆ ಬೆಳೆ ಇಲ್ಲದೆ ನಷ್ಟವಾಗಿದೆ, ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ ಎಂದೆಲ್ಲ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ತಾವು ಎಲ್ಲವನ್ನೂ ಕ್ರೋಢೀಕರಿಸಿ ಸರ್ಕಾರಕ್ಕೆ ಆದೇಶ ಕೊಡುತ್ತಿದ್ದೀರಿ. ಆ ಆದೇಶವನ್ನು ಸ್ವಾಗತಿಸಿದ್ದೇನೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಉಪಯುಕ್ತವಾದ ಸಲಹೆಗಳನ್ನು ಬರೆದುಕೊಂಡಿದ್ದೇನೆ. ಮುಂದಿನ ಮಂತ್ರಿ ಮಂಡಲದ ಸಭೆಯಲ್ಲಿ ಈ ಎಲ್ಲಾ ವಿಚಾರಗಳನ್ನು ತಂದು, ಮಾನ್ಯ ಸದಸ್ಯರು ಸಂಕಷ್ಟವನ್ನು ಏನು ವ್ಯಕ್ತಪಡಿಸಿದ್ದಾರೆ ಆ ಬಗ್ಗೆ ಸರ್ಕಾರ ದಿಟ್ಟತನದಿಂದ ಕ್ರಮ ಕೈಗೊಳ್ಳುತ್ತದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು:- ಮಂಡ್ಯ ಜಿಲ್ಲೆಯಿಂದ ಯಾರು ಕಾಣಲಿಲ್ಲ. ಅದನ್ನು ಬರೆದುಕೊಳ್ಳಿ.

ಶ್ರೀ ಟಿ.ಎನ್ ನರಸಿಂಹಮೂರ್ತಿ:- ತಾವು ಅದೇ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವುದರಿಂದ ತಮ್ಮ ಸೂಚನೆಯನ್ನು ಕೂಡ ಗಮನಿಸಿದ್ದೇನೆ.

ಪ್ರಕಟಣೆ

ಸಭಾಧ್ಯಕ್ಷರು:-

ಸಭೆಯನ್ನು ಮುಂದೂಡುವುದಕ್ಕೆ ಮೊದಲು ಮೂರನೆಯ ಅಧಿವೇಶನದಲ್ಲಿ ನಡೆಸಲಾದ ಮುಖ್ಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ನಾನು ನೀಡಲಿಚ್ಛಿಸುತ್ತೇನೆ.

1990ನೇ ಇಸವಿ ಜೂನ್ 4ರಂದು ಪ್ರಾರಂಭವಾದ ಈ ಸದನವು 34 ದಿನಗಳ ಕಾಲ ಸಮಾವೇಶಗೊಂಡು ಅನೇಕ ಮುಖ್ಯ ವಿಷಯಗಳ ಬಗ್ಗೆ ಚರ್ಚಿಸಿತು.

ದಿನಾಂಕ 11ನೇ ಜೂನ್ 90ರಿಂದ 16ನೇ ಜುಲೈ, 1990 ರವರೆಗೆ ಒಟ್ಟು 25 ದಿನಗಳ ಕಾಲ 1990-91ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಸಲಾಯಿತು.

ಈ ಅವಧಿಯಲ್ಲಿ 1707 ಪ್ರಶ್ನೆಗಳನ್ನು ಸ್ವೀಕರಿಸಲಾಯಿತು. ಆ ಪೈಕಿ 575 ಚುಕ್ಕೆ ಗುರುತಿನ ಪ್ರಶ್ನೆಗಳಿದ್ದು, ಅವುಗಳಲ್ಲಿ 518 ಪ್ರಶ್ನೆಗಳನ್ನು ಸದನದಲ್ಲಿ ಉತ್ತರಿಸಲಾಗಿದೆ. 992 ಚುಕ್ಕೆ ರಹಿತ ಪ್ರಶ್ನೆಗಳಾಗಿದ್ದು, ಅವುಗಳಲ್ಲಿ 883 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.

13 ಅಲ್ಪಕಾಲಾವಧಿಯ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ಒಂದು ಪ್ರಶ್ನೆಗೆ ಉತ್ತರಿಸಲಾಯಿತು.

ಸದಸ್ಯರುಗಳು 9 ನಿಲುವಳಿ ಸೂಚನೆಗಳನ್ನು ನೀಡಿದ್ದು, ಎಲ್ಲಾ ಸೂಚನೆಗಳಿಗೂ ಒಪ್ಪಿಗೆ ತಡೆಹಿಡಿಯಲಾಯಿತು. ಆ ಪೈಕಿ ಮೂರು ಸೂಚನೆಗಳನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ಇತರೆ ನಿಯಮಗಳಡಿಯಲ್ಲಿ ಚರ್ಚಿಸಲಾಯಿತು.

ನಿಯಮ 68ರ ರೀತ್ಯಾ ಅಲ್ಪಕಾಲಾವಧಿ ಮೇರೆಗೆ ಚರ್ಚಿಸಲು ಒಟ್ಟು 12 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 5 ಸೂಚನೆಗಳನ್ನು ಆಂಗೀಕರಿಸಿ ಚರ್ಚಿಸಲಾಯಿತು.

ಈ ಸದನಕ್ಕೆ 80 ಕಾಗದಪತ್ರಗಳು, 22 ಅರ್ಜಿಗಳು, 4 ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಗಳು ಹಾಗೂ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕು ವರದಿಗಳನ್ನು ಒಪ್ಪಿಸಲಾಯಿತು. ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಗಮನ ಸೆಳೆಯುವ 120 ಸೂಚನೆಗಳನ್ನು ಅಂಗೀಕರಿಸಿ, ಆ ಪೈಕಿ 51 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಯನ್ನು ನೀಡಿದರು.

ನಿಯಮ 334ರ ಮೇರೆಗೆ 229 ಸೂಚನೆಗಳನ್ನು ಸದನದ ಗಮನಕ್ಕೆ ತರಲಾಗಿದ್ದು ಅವುಗಳ ಪೈಕಿ 152 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆಯನ್ನು ನೀಡಿದರು.

ಅರ್ಧಗಂಟೆ ಕಾಲಾವಧಿ ಚರ್ಚೆ ನಡೆಸಲು 17 ಸೂಚನೆಗಳನ್ನು ಅಂಗೀಕರಿಸಲಾಗಿದ್ದು, ಅವುಗಳಲ್ಲಿ ಯಾವುದು ಚರ್ಚಿಸಲಾಗಿಲ್ಲ.

1990-91ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು,

1990ನೇ ಇಸವಿಯ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಸದನದಲ್ಲಿ ಅಂಗೀಕರಿಸಲಾಯಿತು.

ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ನಾಲ್ಕು ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಒಂದು ಸೂಚನೆಗೆ ತೀರ್ಪು (ರೂಲಿಂಗ್) ನೀಡಲಾಗಿದೆ.

ಈ ಅಧಿವೇಶನದಲ್ಲಿ 13 ಖಾಸಗಿ ನಿರ್ಣಯದ ಸೂಚನೆಗಳನ್ನು ಸ್ವೀಕರಿಸಿದ್ದು, 11 ನಿರ್ಣಯವನ್ನು ಅಂಗೀಕರಿಸಿ, ಆ ಪೈಕಿ ಒಂದು ನಿರ್ಣಯವನ್ನು ಮಾತ್ರ ಸದನದಲ್ಲಿ ಚರ್ಚಿಸಲಾಗಿದೆ.

ಸಭಾನಾಯಕರು, ವಿರೋಧ ಪಕ್ಷದ ನಾಯಕರು ಉಪಸಭಾಧ್ಯಕ್ಷರಿಯವರು ಮಾನ್ಯ ಮಂತ್ರಿಗಳು ಎಲ್ಲಾ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಹಾಗೂ ಪತ್ರಿಕಾ ಪ್ರತಿನಿಧಿಗಳು ನೀಡಿದ ಸಹಕಾರಕ್ಕಾಗಿ ನಾನು ಅವರಿಗೆ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶ್ರಿ ಟಿ.ಎನ್. ನರಸಿಂಹಮೂರ್ತಿ:- ಸದನದ ಪರವಾಗಿ, ಸರ್ಕಾರದ ಪರವಾಗಿ ಮತ್ತು ಎಲ್ಲರ ಪರವಾಗಿ ಕಾರ್ಯಕಲಾಪಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿದ್ದಕ್ಕೆ ತಮಗೂ ಉಪಾಧ್ಯಕ್ಷರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು:- ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು 6 ಘಂಟೆ 41 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.)

(+ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)